## <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.569/2022

**PW**:1

**ದಿನಾಂಕ 02.06.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 1, 3 ಮತ್ತು 4 ಪ್ರತಿವಾದಿ ಪರ ಶ್ರೀ.ಬಿ.ಬಿ.ಕೆ. ವಕೀಲರಿಂದ:</u>**

ನಾನು ವಿಜಯಪುರದಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತೇನೆ. ನನ್ನ ಗಂಡ ಭೀರಪ್ಪ ಇವರು ಮರಣ ಹೊಂದಿರುತ್ತಾರೆ. ಸದರಿ ನನ್ನ ಗಂಡ ಆಗಸ್ಟ್ 2001 ರಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಉತಾರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಾನು ನನ್ನ ಗಂಡನ ಮರಣ ಉತಾರವನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ್ಗೆ 8 ತಿಂಗಳ ಹಿಂದೆ ನಮ್ಮ ಹೊಲದ ಉತಾರವನ್ನು ನೋಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂ.346/2 ಇರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ದಾವಾ ಆಸ್ತಿಯು ಪೋಡಿಯ ನಂತರ ದಾವಾ ಆಸ್ತಿ ಸರ್ವೆ ನಂ.346/4 ಆಗಿರುತ್ತದೆ. ಸದರಿ ದಾವಾ ಆಸ್ತಿ ಪೋಡಿಯಾದ ಬಗ್ಗೆ ನಾನು ದಾಖಲೆಗಳನ್ನು ಹಾಜರುಮಾಡಿಲ್ಲ. ಸದರಿ ದಾವಾ ಆಸ್ತಿಯು ಪೋಡಿಯಾಗಿ ಈಗ 346/4 ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ನನ್ನ ಗಂಡನ ಅಣ್ಣನ ಹೆಂಡತಿ ಇರುತ್ತಾರೆ. ನಾನು ಜೇವೂರನ್ನು 2021-22 ನೇ ಇಸವಿಯಲ್ಲಿ ಬಿಟ್ಟಿರುತ್ತೇನೆ. ನನ್ನ ಗಂಡ ಮರಣ ಹೊಂದದೇ ಇದ್ದರು ಸಹ ಮರಣ ಹೊಂದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ತೀರಿಕೊಂಡ ಬಗ್ಗೆ ಮರಣ ಉತಾರವನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ.

ನನಗೆ ಮದುವೆಯಾಗಿರುತ್ತದೆ. ನನ್ನ ಗಂಡ ಮರಣ ಹೊಂದಿರುತ್ತಾರೆ. ಭೀರಪ್ಪ ಇವರಿಗೆ ಮಕ್ಕಳು ಇಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

-2-

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.